# ಪ್ರಥಮ ಪಿಯುಸಿ
# ೦೧ - ಕನ್ನಡ
# ಮಾದರಿ ಪ್ರಶ್ನೆ ಪತ್ರಿಕೆ

ಸಮಯ: 3.15 ಗಂಟೆ ಅಂಕಗಳು: 100

## ಅ - ವಿಭಾಗ

I. ಅ. ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ. 1×10=10

1. ತಪವನ್ನು ಘಟ್ಟಿವಾಳಯ್ಯ ಏನೆಂದು ಕರೆಯುತ್ತಾನೆ ?
2. ಚೋಳ ದೇಶವನ್ನು ಆಳುತ್ತಿದ್ದ ದೊರೆ ಯಾರು ?
3. ಭೂದೇವಿಯ ಮಗಳು ಯಾರು ?
4. ಶಿಶುಮಕ್ಕಳು ಹೂವು ತರಲು ಎಲ್ಲಿಗೆ ಹೋಗಿದ್ದರು ?
5. ತನ್ನನ್ನು ಕ್ಷಮಿಸುವಂತೆ ಕವಿ ಯಾರಲ್ಲಿ ಕೇಳುತ್ತಾನೆ ?
6. ಬಡ ಮಕ್ಕಳ ಪಾಲಿಗೆ ಚಾಕಲೇಟ್ ಯಾವುದು ?
7. ಜ್ಯೋತಿಷ್ಯದ ಉಗಮವು ಎಲ್ಲಿ ಕಂಡುಬರುತ್ತದೆ ?
8. ಶಾಸ್ತ್ರಿ ಮಾಸ್ತರರ ಹೆಂಡತಿಯ ಹೆಸರೇನು ?
9. ಕಪಿಲವಸ್ತುವಿನ ಇಂದಿನ ಹೆಸರೇನು ?
10. ರಂಗರಾವ್ ಸ್ಥಾಪಿಸಿದ ಸಂಸ್ಥೆ ಯಾವುದು ?
11. ಬೋಳೇಶಂಕರನ ಊರು ಯಾವುದು ?
12. ಪಿಶಾಚಿಗಳು ಯಾರ ಹೆಸರು ಕೇಳಿದರೆ ಹೆದರುತ್ತವೆ ?
13. ಬೋಳೇಶಂಕರನಿಂದ ಬೇರು ಕಿತ್ತು ಕೊಳ್ಳಲು ಪಿಶಾಚಿ ಯಾವ ವೇಷದಲ್ಲಿ ಬರುತ್ತದೆ ?
14. ಸೈನಿಕರು ಯಾವುದಕ್ಕೆ ಜಯವಾಗಲಿ ಎಂದು ಹಾಡಿದರು ?
15. ಕತ್ತಲೆಯ ನಿಜಜನಕನನು ಯಾರು ?

## ಆ - ವಿಭಾಗ

II. ಅ. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ 2-3 ವಾಕ್ಯಗಳಲ್ಲಿ ಉತ್ತರಿಸಿ . 2×4=8

16. ಕರ್ಣನ ಜನ್ಮರಹಸ್ಯವನ್ನು ಯಾರು ಯಾರು ಅರಿತಿದ್ದರು ?
17. ಕಣ್ಣು ಹಾಗೂ ಕರ್ಣಗಳಿಗೆ ಶೃಂಗಾರ ಯಾವುದು ?
18. ಚೆನ್ನಯ್ಯನ ಗುಪ್ತ ಭಕ್ತಿ ಯಾವ ರೀತಿಯದು ?
19. ಮೃಗ ಪಕ್ಷಿಗಳನ್ನು ಸ್ವಾಮಿ ಹೇಗೆ ರಕ್ಷಿಸುತ್ತಾನೆ ?
20. ಮಾದೇವನ ಶಿಶುಮಕ್ಕಳ ಹೆಸರೇನು ?
21. ಸರಸ್ವತಿಯ ಸಚಿವ ಮಂಡಲದ ಸದಸ್ಯರು ಯಾರು ?

ಆ. ಯಾವುದಾದರೂ ಮೂರು ಪ್ರಶ್ನೆಗಳಿಗೆ 2-3 ವಾಕ್ಯಗಳಲ್ಲಿ ಉತ್ತರಿಸಿ 2×3=6

22. ವೈದ್ಯಾಧಿಕಾರಿಗೆ ಹುಡುಗ ಹೇಗೆ ಕಂಡಾನು ?
23. ನಮ್ಮ ಯಾವ ಜಿಲ್ಲೆಗಳು ರಾಗಿಯ ಕಣಜಗಳಾಗಿವೆ ?

24. ಜ್ಯೋತಿಷ್ಯದ ಪ್ರಕಾರ ಗ್ರಹಗಳೆಷ್ಟು? ಅವುಗಳು ಯಾವುವು ?
25. ನೇಪಾಳದ ವೈಮಾನಿಕ ಸಾರಿಗೆ ವ್ಯವಸ್ಥೆ ಹೇಗಿದೆ ?
26. ಅಪರಾಜಿತಾ ಬಳ್ಳಿಯ ಗುಣ ಯಾವುದು ?

ಇ. ಯಾವುದಾದರೂ ಮೂರು ಪ್ರಶ್ನೆಗಳಿಗೆ 2-3 ವಾಕ್ಯಗಳಲ್ಲಿ ಉತ್ತರಿಸಿ . 2×3=6

27. ಬೆಟ್ಟದ ಮೇಲಿನ ದೇವತೆ ಬೋಳೇಶಂಕರನ ಅಣ್ಣ ಅತ್ತಿಗೆಯರಿಗೆ ಹೇಗೆ ಕಾಣಿಸುತ್ತದೆ ?
28. ಸಾಹ್ಕಾರನು ತನ್ನ ಸಹೋದರರಿಗೆ ಆಸ್ತಿಯನ್ನು ಹೇಗೆ ಹಂಚಿದನು ?
29. ಪಿಶಾಚಿಯು ಯಾವುದರಿಂದ ನಾಣ್ಯ ಹಾಗೂ ಸಿಪಾಯಿಗಳನ್ನು ಮಾಡಿಕೊಡುತ್ತದೆ ?
30. ಸೈತಾನನ ಆಗಮನವನ್ನು ಭಾಗವತ ಹೇಗೆ ತಿಳಿಸಿದ್ದಾನೆ ?
31. ಬೋಳೇಶಂಕರ ಏನೆಂದು ಡಂಗುರ ಸಾರಿಸುತ್ತಾನೆ ?

## ಇ - ವಿಭಾಗ

III. ಅ. ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 3×2=6

32. ನಿನ್ನೊರೆಗೆ ದೊರೆಗೆ ಗಂಡರುಮೊಳರೇ .
33. ರಾಮನ ಸೇವೆ ಸಂದುದೇ ತನಗೆ .
34. ಕಂಡಿಲ್ಲ ನಾನಿನ್ನೂ ಬದುಕಿನಾಗಸದ ನೀಲ .
35. ನಗುವ ಚಂದಿರ ಕೈಗಂಟಿ ಕೊಳ್ಳುತ್ತಿದ್ದಾನೆ.

ಆ. ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 3×1=3

36. ತುಟಿಬಣ್ಣ ಕೆಡದಂತೆ ಚಮಚೆಯಲ್ಲಿ ತಿನ್ನುವ ಚೆಲುವೆಯರು
37. ರೈಲು ಹೊರಡಲು ಜ್ಯೋತಿಷ್ಯದ ಅನುಮತಿಯನ್ನು ಯಾರೂ ಕೇಳುವುದಿಲ್ಲ .
38. ಬುದ್ಧನೇ ಇಲ್ಲದ ಅರ ಮನೆಗೊಬ್ಬ ಗಾರ್ಡ್ .

ಇ. ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 3×1=3

39. ಇವನಿಗೇನು ಹೆಂಡತೀನೇ ಮಕ್ಕಳೆ .
40. ರಾಜಕುಮಾರಿಗೆ ಬಂದಿರೋದು ರಾಜರೋಗ .
41. ತಲೆಯಿಂದ ಕೆಲಸ ಮಾಡುವುದು ಹೇಗೆಂದು ನಿಮಗೆ ಹೇಳಿಕೊಡುತ್ತೇನೆ .

## ಈ ವಿಭಾಗ

IV. ಅ. ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 4×3=12

42. ಆಡಂಬರದ ಭಕ್ತಿಯನ್ನು ಅಲ್ಲಮ ಹೇಗೆ ಖಂಡಿಸುತ್ತಾನೆ ?
43. ಚೆನ್ನಯ್ಯ ತನ್ನ ಕಾಯಕವನ್ನು ಹೇಗೆ ಮಾಡುತ್ತಿದ್ದನು ?
44. ಸೀತೆ ಕಲ್ಮರಂ ಕರಗುವಂತೆ ದುಃಖಿಸಿದ ಪರಿಯನ್ನು ವಿವರಿಸಿ .

45. ಸರಸ್ವತಿಯ ಸಚಿವ ಮಂಡಲ ವನ್ನು ಕುರಿತು ಬರೆಯಿರಿ .
46. ಮಗುವಿನ ವ್ಯಕ್ತಿತ್ವಕ್ಕೂ ಹಣ್ಣುಗಳಿಗೂ ಕವಿ ಹೇಗೆ ಸಂಬಂಧಗಳನ್ನು ಕಲ್ಪಿಸಿದ್ದಾನೆ ? ವಿವರಿಸಿ .

ಆ. ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 4×2=8

47. ಮೊಮ್ಮಗನ ಪ್ರಾಣ ಉಳಿಸಿಕೊಳ್ಳಲು ಕರಿಸಿದ್ದೇಗೌಡ ಪಟ್ಟ ಪಾಡೇನು ?
48. 'ಅನಾಥ ಬಾಲಕರಾಶ್ರಮ'ವನ್ನು ಶಾಸ್ತ್ರಿ ಮಾಸ್ತರರು ಹೇಗೆ ಪ್ರಾರಂಭಿಸಿದರು ? ಅದರ ಉದ್ದೇಶವೇನು ?
49. ರಂಗರಾವ್ ಅಸ್ಪೃಶ್ಯರನ್ನು ಶಿಕ್ಷಣ ಪಡೆಯಲು ಮನ ಒಲಿಸಿದ ಬಗೆಯನ್ನು ವಿವರಿಸಿ .
50. ಪುರುಷ ಸಮಾಜದ ಬಗ್ಗೆ ಶಕುಂತಲೆಯ ನಿಲುವೇನು ?

ಇ. ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ . 4×2=8

51. ಬೋಳೇಶಂಕರ ಮತ್ತು ಅವನ ಅಣ್ಣಂದಿರನ್ನು ಭಾಗವತರು ಹೇಗೆ ಪರಿಚಯಿಸುತ್ತಾರೆ ?
52. ರಾಜಕುಮಾರಿಯ ಹೊಟ್ಟೆನೋವು ಪ್ರಸಂಗದಿಂದ ಬೋಳೇಶಂಕರ ರಾಜನಾದ ಕಥೆಯನ್ನು ವಿವರಿಸಿ .
53. ಸೈನಿಕರು ಏನೇನನ್ನು ನಾಶ ಮಾಡಿದರು ಎಂದು ಶಿವಾಪುರದ ಜನರು ಹೇಳುತ್ತಾರೆ ?
54. ತಲೆಯಿಂದ ಕೆಲಸ ಮಾಡಬೇಕೆಂಬ ಸೈತಾನನ ಭಾಷಣದ ಸ್ವಾರಸ್ಯವನ್ನು ವಿವರಿಸಿ .

## ಉ – ವಿಭಾಗ

V. ಅ. ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ. 5×1=5

55. ಜನಕಂಗೆ ಜಲಾಂಜಲಿಯಂ
ತನೂಭವಂ ಕುಡುವುದುಚಿತಮದುಗೆಟ್ಟೀಗಳ್
ನಿನಗಾಂ ಕುಡುವಂತಾದುದೆ
ತನೂಜ ನೀಂ ಕ್ರಮವಿಪರ್ಯಯಂ ಮಾಡುವುದೇ

56. ಕಡಲುಗಳ್ಳರ ಕಾಟ ಕೊನೆಗೊಂಡರೇನಂತೆ
ಒಡಲುಗಳ್ಳರು ಇನ್ನು ಇಲ್ಲೆ ಇಹರೋ
ರೈತ ಮಕ್ಕಳು ಬಯಸಿ ಬೆಳೆದ ಬೆಳೆಸನು ಸುಲಿದು
ಸುಖಪಡುವ ರಕ್ಕಸರು ನಡುವೆ ಇಹರೊ
ನರನಸ್ಥಿಪಂಜರದ ಅಡಿಗಲ್ಲ ಮೇಲಿವರು
ಸುಸ್ಥಿರವು ಎನುವಂಥ ಭವನಗಳನು
ನಿರ್ಮಿಸುವ ಕ್ರೂರಜನ ತೂಗಲೆಂದೇ ಬಂದು
ಕೂಸ ಕೊರಳನೆ ಹಿಚುಕಲೆಳಸುತಿಹರು

## ಭಾಷಾಭ್ಯಾಸ

VI. ಅ. ಯಾವುದಾದರೂ ಆರು ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ 2×6=12

57. ಯಾವುದಾದರೂ ಎರಡು ಪದಗಳ ಅರ್ಥ ಬರೆಯಿರಿ .
ರುಧಿರ , ಪತಾಕೆ , ಲತೆ ,ವಿಪಿನ .
58. ಯಾವುದಾದರೂ ಎರಡು ಪದಗಳನ್ನು ಬಿಡಿಸಿ ಬರೆಯಿರಿ .
ರಸಾನುಭವ , ಕತ್ತೆತ್ತಿ , ಬಾಲಕರಾಶ್ರಮ , ದಿವ್ಯಾನ್ನ .
59. ಯಾವುದಾದರೂ ಎರಡು ಪದಗಳ ಸಮಾನಾರ್ಥಕ ಪದಗಳನ್ನು ಬರೆಯಿರಿ .
ಅರಸ , ಇಳೆ , ಗಜ , ಕಪಿ .
60. ಯಾವುದಾದರೂ ಎರಡು ಪದಗಳ ತದ್ಭವ ರೂಪ ಬರೆಯಿರಿ .
ಆಕಾಶ , ಜನ್ಮ , ರಕ್ತ , ಬ್ರಹ್ಮ .
61. ಯಾವುದಾದರೂ ಎರಡು ಪದಗಳ ವಿರುದ್ಧ ಪದಗಳನ್ನು ಬರೆಯಿರಿ .
ಉಚಿತ , ಸತ್ಯ , ಸಹಕಾರ , ಗುಣ .
62. ಯಾವುದಾದರೂ ಎರಡು ಅನ್ಯದೇಶೀಯ ಪದಗಳನ್ನು ಬರೆಯಿರಿ
63. ಯಾವುದಾದರೂ ಎರಡು ಪದಗಳ ಗ್ರಾಂಥಿಕ ರೂಪ ಬರೆಯಿರಿ
ಮೊಕ , ಇಟ್ಕೊಂಡು , ನಾಲ್ಗೆ , ಕೇಳ್ರಿ
64. ಯಾವುದಾದರೂ ಎರಡು ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ .
ಅಡಿಪಾಯ , ಮುಖವಾಡ , ಮುಗಿಬೀಳು , ಪಿಸುಮಾತು .

ಆ. ಯಾವುದಾದರೂ ಒಂದು ವಿಷಯದ ಕುರಿತು ಪ್ರಬಂಧ ಬರೆಯಿರಿ . 5×1=5

65. ಮೂಢ ನಂಬಿಕೆಗಳು
66. ನನ್ನ ಮೆಚ್ಚಿನ ಸಾಹಿತಿ

ಇ. ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ . 4×1=4

67. ನಿಮ್ಮ ಕಾಲೇಜಿನಲ್ಲಿ ಕೈಗೊಂಡ ಪ್ರವಾಸವನ್ನು ಕುರಿತು ಗೆಳೆಯ/ ಗೆಳತಿಗೆ ಒಂದು ಪತ್ರ ಬರೆಯಿರಿ .
68. ವರ್ಗಾವಣೆ ಪತ್ರವನ್ನು ಕೋರಿ ನಿಮ್ಮ ಪ್ರಾಂಶುಪಾಲರಿಗೆ ಒಂದು ಪತ್ರ ಬರೆಯಿರಿ

ಈ. ಯಾವುದಾದರೂ ಒಂದು ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ . 4×1=4

69. ಮಾತು ಬೆಳ್ಳಿ ; ಮೌನ ಬಂಗಾರ.
70. ಕುಂಬಾರನಿಗೆ ವರುಷ ; ದೊಣ್ಣೆಗೆ ನಿಮಿಷ .

* * * * * * *

**Blue Print- 1st PUC Kannada**

| | I. ಪದ್ಯ ಭಾಗ | ೧ ಅಂಕ | ೨ ಅಂಕ | ೩ಅಂ ಕ | ೪ಅಂ ಕ | ೫ಅಂ ಕ |
|---|---|---|---|---|---|---|
| 1 | ದುರ್ಯೋಧನ ವಿಲಾಪ | | 1 | 1 | | 1 |
| 2 | ವಚನಗಳು | 1 | 1 | | 1 | |
| 3 | ದೇವನೊಲಿದನಕುಲವೆಸತ್ಕುಲಂ | 1 | 1 | | 1 | |
| 4 | ಹಲುಬಿದಳ್ ಕಲ್ಮರಂ ಕರಗುವಂತೆ | 1 | | 1 | 1 | |
| 5 | ತಲ್ಲಣಿಸದಿರು ಕಂಡ್ಯ ತಾಳು ಮನವೇ | | 1 | | | |
| 6 | ಶಿಶು ಮಕ್ಕಳಿಗೊಲಿದ ಮಾದೇವ | 1 | 1 | | | |
| 7 | ಅಖಂಡ ಕರ್ನಾಟಕ | | 1 | | 1 | |
| 8 | ಎಂದಿಗೆ | | | | | 1 |
| 9 | ಮಗು ಮತ್ತು ಹಣ್ಣುಗಳು | | | | 1 | |
| 10 | ನಾ ಬರಿ ಭ್ರೂಣವಲ್ಲ | | | 1 | | |
| 11 | ದೇವರಿಗೊಂದು ಅರ್ಜಿ | 1 | | 1 | | |
| | II ಗದ್ಯ ಭಾಗ | | | | | |
| 1 | ಗಾಂಧಿ | | 1 | | 1 | |
| 2 | ರಾಗಿ ಮುದ್ದೆ | 1 | 1 | 1 | | |
| 3 | ಜ್ಯೋತಿಷ್ಯ ಅರ್ಥಪೂರ್ಣವೂ ಅರ್ಥರಹಿತವೂ | 1 | 1 | 1 | | |
| 4 | ಶಾಸ್ತ್ರಿ ಮಾಸ್ತರ ಮತ್ತವರ ಮಕ್ಕಳು | 1 | | | 1 | |
| 5 | ಬುದ್ಧ ಬಿಸಿಲು ಊರಿನವನು | 1 | 1 | 1 | | |
| 6 | ಮಹಾತ್ಮರ ಗುರು | 1 | | | 1 | |
| 7 | ನಿರಾಕರಣೆ | | 1 | | 1 | |
| | III. ಬೋಳೆ ಶಂಕರ | 5 | 5 | 3 | 4 | |
| | IV. ಭಾಷಾಭ್ಯಾಸ | | 8 | | | |
| | V. ಪ್ರಬಂಧ | | | | | 2 |
| | VI. ಪತ್ರಲೇಖನ | | | | 2 | |
| | VII. ಗಾದೆ ಮಾತು | | | | 2 | |

ನೀಲನಕ್ಷೆ ಮತ್ತು ಮಾದರಿ ಪ್ರಶ್ನೆಪತ್ರಿಕೆಗಳ ಸಿದ್ಧತೆಯನ್ನು ಇಲಾಖೆಯು ನೀಡಿದ ಎಲ್ಲಾ ಸೂಚನೆಗಳನ್ನು ಗಮನಿಸಿ ಜಾಗರೂಕತೆಯಿಂದ ಸಿದ್ಧಪಡಿಸಿದೆ ಹಾಗೂ ಯಾವುದೇ ತಪ್ಪು ಇರುವುದಿಲ್ಲವೆಂದು ಪ್ರಮಾಣೀಕರಿಸಿದೆ.




ಮುಖ್ಯಸ್ಥರು



ಸದಸ್ಯರು



ಸದಸ್ಯರು